**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂ.ಯವರ ನ್ಯಾಯಾಲಯ, ಕುಂದಾಪುರ**

**ಸಿ.ಸಿ ನಂಬ್ರಃ 8/2025**

ಸರ್ಕಾರದ ಪರ
ಕುಂದಾಪುರ ಠಾಣಾ ಪೊಲೀಸರು. --- ಪಿರ್ಯಾದಿದಾರರು

-ಮತ್ತು-

ಅಸ್ಪಕ್ ಹಾಗೂ ಇತರರು --- ಆರೋಪಿತರು

**ಃದೋಷಾರೋಪಣೆಃ**

**ಶ್ರೀಮತಿ ಶ್ರುತಿ ಶ್ರೀ ಎಸ್. ಬಿ.ಎ., ಎಲ್‌ಎಲ್.ಬಿ., 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ,. ಕುಂದಾಪುರ ಆದ ನಾನು ಆರೋಪಿತರಾದ ನಿಮಗೆ ಈ ಮೂಲಕ ಮಾಡುವ ಆಪಾದನೆಯ ಸಾರಾಂಶ ಏನೆಂದರೆಃ**

1. ಅಸ್ಪಕ್, 37 ವರ್ಷ,
ತಂದೆಃ ಜಿ ಅಬುಬಾಕರ್,
ವಾಸಃ 7-478 ಎಂ. ಕೋಡಿ,
ಬೆಲಾಲ ಜುಮ್ಮಾ ಮಸೀದಿ ಹತ್ತಿರ,
ಕಸಬಾ ಗ್ರಾಮ, ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ.

2. ಮಹಮ್ಮದ್ ಅಪ್ಸರ್ ಯಾನೆ ಅಶ್ರಫ್, 35 ವರ್ಷ,
ತಂದೆಃ ಜಿ ಅಬುಬಾಕರ್,
ವಾಸಃ 7-478 ಎಂ. ಕೋಡಿ,
ಬೆಲಾಲ ಜುಮ್ಮಾ ಮಸೀದಿ ಹತ್ತಿರ,
ಕಸಬಾ ಗ್ರಾಮ, ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ.

ಕುಂದಾಪುರ ಪೋಲಿಸ್ ಠಾಣಾ ಸರಹದ್ದಿನಲ್ಲಿ, ಆರೋಕೆಪಿಯವರಿಗೂ ಮತ್ತು ಸಾಕ್ಷೀದಾರರ ಮನೆಯವರಿಗೂ ಜಾಗದ ಕಂಪೌಂಡ್ ವಿಚಾರದಲ್ಲಿ ತಕರಾರು ಇದ್ದ ಕಾರಣ ಆರೋಪಿತರು ದಿ. 21.10.2024 ರಂದು 12.00 ಗಂಟೆಗೆ ಕುಂದಾಪುರ ತಾಲೂಕು, ಕಸಬಾ ಗ್ರಾಮದ ಎಂ ಕೋಡಿ ಬಿಲಾಲ್ ಜುಮ್ಮಾ ಮಸೀದಿ ಬಳಿ ಸಾಕ್ಷಿ1 ನೇಯವರ ಬಾಬ್ತು ಜಾಗದಲ್ಲಿಸಿ ಸಾಕ್ಷಿ2 ನೇಯವರು ಮೀನನ್ನು ಕೊಯ್ದು, ತೊಳೆದು ನೀರನ್ನು ಮನೆಯ ಬಳಿ ಇರುವ ತೆಂಗಿನ ಮರದ ಬುಡಕ್ಕೆ ಹಾಕಿದ್ದು ಆಗಾ ಆರೋಪಿತರಾದ ನೀವುಗಳು ಸಾಕ್ಷಿ1 ನೇಯವರ ಜಾಗಕ್ಕೆ ಅತಿಕ್ರಮ ಪ್ರವೇಶ ಮಾಡಿದ್ದು, ಆ ಮೂಲಕ ಆರೋಪಿತರಾದ ನೀವು ಕಲಂ 329(2) ಜೊತೆಗೆ 3(5) ಬಿ.ಎನ್.ಎಸ್. ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

2. ಮೇಲ್ಕಂಡ ದಿನ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವುಗಳು ಚಾ.ಸಾ.1 ನೇಯವರ ಜಾಗಕ್ಕೆ ಅತಿಕ್ರಮ ಪ್ರವೇಶ ಮಾಡಿ ಚಾ.ಸಾ.1 ನೇಯವರನ್ನು ತಡೆದು ನಿಲ್ಲಿಸಿದ್ದು, ಆ ಮೂಲಕ ಬಿ.ಎನ್.ಎಸ್. ಕಲಂ 126(2) ಜೊತೆಗೆ 3(5)ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

3. ಮೇಲ್ಕಂಡ ದಿನ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವುಗಳ ಸಮಾನ ಉದ್ದೇಶದಿಂದ ಚಾ.ಸಾ.2 ನೇಯವರನ್ನು ಉದ್ದೇಶಿಸಿ ಬೇವರ್ಸಿ, ಬೋಳಿಮಗನೆ, ನೀನು ಯಾಕೆ ಮೀನು ನೀರನ್ನು ತಂದು ತೆಂಗಿನ ಮರಕ್ಕೆ ಹಾಕಿದ್ದೀಯಾ ಎಂದು ಅವಾಚ್ಯ ಶಬ್ದಗಳಿಂದ ಬೈದು ಅವಮಾನ ಮಾಡಿದ್ದು, ಆ ಮೂಲಕ ಬಿ.ಎನ್.ಎಸ್. ಕಲಂ 352 ಜೊತೆಗೆ 3(5)ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

4. ಮೇಲ್ಕಂಡ ದಿನ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವುಗಳು ಸಮಾನ ಉದ್ದೇಶದಿಂದ 1ನೇ ಆರೋಪಿತನು ಚಾ.ಸಾ2 ನೇಯವರಿಗೆ ದೂಡಿ ಆತನ ಕೆನ್ನೆಗೆ ಹೊಡೆದು, 2 ನೇ ಆರೋಪಿತನು ದೂಡಿ ಹಾಕಿ ಆತನ

ಹೊಟ್ಟೆಯ ಮೇಲೆ ತುಳಿದು ಸಾಕ್ಷಿ3 ನೇಯವರು ಗಲಾಟೆಯನ್ನು ಬಿಡಿಸಲು ಹೋದಾಗ ಆರೋಪಿ 2 ನೇಯವರು ಕೈಯಿಂದ ಹೊಡೆದು ಸಾಮಾನ್ಯ ಸ್ವರೂಪದ ಗಾಯವಾಗಲು ಕಾರಣರಾಗಿದ್ದು, ಆ ಮೂಲಕ ಬಿ.ಎನ್.ಎಸ್. ಕಲಂ 115(2) ಜೊತೆಗೆ 3(5) ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

5. ಮೇಲ್ಕಂಡ ದಿನ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವುಗಳು ಸಮಾನ ಉದ್ದೇಶದಿಂದ 2 ನೇ ಆರೋಪಿತನು ಒಂದು ಮರದ ದೊಣ್ಣೆಯಿಂದ ಸಾಕ್ಷಿ2 ನೇಯವರ ಹಣೆಗೆ, ಹೊಟ್ಟೆಗೆ, ಕೈಕಾಲುಗಳಿಗೆ ಹೊಡೆದು, ಬಳಿಕ ಆರೋಪಿ 1 ನೇಯವರು ಸಾಕ್ಷಿ2 ನೇಯವರಿಗೆ ದೊಣ್ಣೆಯನ್ನು ತಂದು ಬೆನ್ನಿಗೆ ತಲೆಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯವಾಗಲು ಕಾರಣರಾಗಿದ್ದು, ಆ ಮೂಲಕ ಬಿ.ಎನ್.ಎಸ್. ಕಲಂ 118(1) ಜೊತೆಗೆ 3(5) ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

6. ಮೇಲ್ಕಂಡ ದಿನ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವುಗಳು ಸಮಾನ ಉದ್ದೇಶದಿಂದ ಸಾಕ್ಷಿ1 ನೇಯವರ ಮೈಗೆ ಕೈ ಹಾಕಿ ಮಾನಕ್ಕೆ ಕುಂದುಂಟು ಮಾಡುವ ಉದ್ದೇಶದಿಂದ ದೂಡಿ ಎರಡು ಭುಜಕ್ಕೂ ಕೈಯಿಂದ ಹೊಡೆದು ಮಾನಕ್ಕೆ ಕುಂದುಂಟು ಮಾಡಿದ್ದು, ಆ ಮೂಲಕ ಬಿ.ಎನ್.ಎಸ್. ಕಲಂ 74 ಜೊತೆಗೆ 3(5)ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

7. ಮೇಲ್ಕಂಡ ದಿನ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವುಗಳು ಸಮಾನ ಉದ್ದೇಶದಿಂದ ಸಾಕ್ಷಿ1 ಮತ್ತು 2 ನೇಯವರಿಗೆ ತೆಂಗಿನ ಮರಗಳಿಗೆ ಗೊಬ್ಬರ ಮೀನು ನೀರು ಹಾಕಿದರೆ ನಿನ್ನನ್ನು ಸಾಯಿಸದೇ ಬಿಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿದ್ದು, ಆ ಮೂಲಕ ಬಿ.ಎನ್.ಎಸ್. ಕಲಂ 351(2) ಜೊತೆಗೆ 3(5) ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

(ಸದರಿ ಆರೋಪಗಳ ಕುರಿತಂತೆ ನೀವು ಈ ನ್ಯಾಯಾಲಯದಿಂದ ವಿಚಾರಣೆಗೆ ಗುರಿಯಾಗಬೇಕೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ )
ದಿ. 28.11.2025

1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ., ಕುಂದಾಪುರ.

1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ನ್ಯಾಯಾಲಯ, ಕುಂದಾಪುರ

**ಸಿ.ಸಿ. ಸಂಖ್ಯೆ: 8/2025**

**ಫಿರ್ಯಾದುದಾರರು:** ಸರಕಾರದ ಪರವಾಗಿ ಕುಂದಾಪುರ ಠಾಣಾ ಪೋಲಿಸರು,

**- ವಿರುದ್ಧ -**

**ಆರೋಪಿ** : **1.** ಅಸ್ಪಕ್, ತಂದೆ: ಜಿ ಅಬುಬಾಕರ್,

**1. ನಿಮಗೆ ಓದಿ ಹೇಳಿದ ದೋಷಾರೋಪಣೆಯು ಅರ್ಥವಾಗಿದೆಯೇ ?**

ಉ.

**2. ನೀವು ತಪ್ಪನ್ನು ಒಪ್ಪಿಕೊಳ್ಳುತ್ತೀರ ಅಥವಾ ವಿಚಾರಣೆ ಮಾಡ ಬಯಸುವಿರಾ ?**

ಉ.

**ಮೇಲ್ಕಂಡ ದೋಷಾರೋಪಣೆಯನ್ನು ಆರೋಪಿಗೆ ತಿಳಿದ ಭಾಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ ಆರೋಪಿ ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು ಅವು ಸರಿಯಾಗಿರುತ್ತವೆಂದು ಈ ಮೂಲಕ ದೃಢೀಕರಿಸುತ್ತೇನೆ.**

**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**

**ಪ್ರ.ದ.ನ್ಯಾ.ದಂ., ಕುಂದಾಪುರ.**

1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ನ್ಯಾಯಾಲಯ, ಕುಂದಾಪುರ

**ಸಿ.ಸಿ. ಸಂಖ್ಯೆ: 8/2025**

**ಫಿರ್ಯಾದುದಾರರು:** ಸರಕಾರದ ಪರವಾಗಿ ಕುಂದಾಪುರ ಠಾಣಾ ಪೋಲಿಸರು,

**- ವಿರುದ್ಧ -**

**ಆರೋಪಿ** : **2.** ಮಹಮ್ಮದ್ ಅಪ್ಸರ್ ಯಾನೆ ಅಶ್ರಫ್, ತಂದೆ: ಜಿ ಅಬುಬಾಕರ್,

**1. ನಿಮಗೆ ಓದಿ ಹೇಳಿದ ದೋಷಾರೋಪಣೆಯು ಅರ್ಥವಾಗಿದೆಯೇ ?**

ಉ.

**2. ನೀವು ತಪ್ಪನ್ನು ಒಪ್ಪಿಕೊಳ್ಳುತ್ತೀರ ಅಥವಾ ವಿಚಾರಣೆ ಮಾಡ ಬಯಸುವಿರಾ ?**

ಉ.

**ಮೇಲ್ಕಂಡ ದೋಷಾರೋಪಣೆಯನ್ನು ಆರೋಪಿಗೆ ತಿಳಿದ ಭಾಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ ಆರೋಪಿ ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು ಅವು ಸರಿಯಾಗಿರುತ್ತವೆಂದು ಈ ಮೂಲಕ ದೃಢೀಕರಿಸುತ್ತೇನೆ.**

**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**

**ಪ್ರ.ದ.ನ್ಯಾ.ದಂ., ಕುಂದಾಪುರ.**